ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬರಬೇಕಾಗಿರುವ ಕಬ್ಬಿನ ಬಾಕಿ ಕುರಿತು

2264 (2792) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 2002–03ನೇ ಸಾಲಿನಲ್ಲಿ ಅರೆದ ಕಬ್ಬಿನ ಪ್ರಮಾಣವೆಷ್ಟು;

ಆ) ಕಾರ್ಖಾನೆಗೆ ಸರಬರಾಜು ಮಾಡಿರುವ ಕಬ್ಬಿನ ಬಾಬ್ತು ಈವರೆಗೆ ರೈತರಿಗೆ ಪಾವತಿ ಮಾಡಿರುವ ಹಾಗೂ ಬಾಕಿ ನೀಡಬೇಕಾದ ಹಣವೆಷ್ಟು;

ಇ) ರೈತರಿಗೆ ಬಾಕಿ ನೀಡಬೇಕಾದ ಹಣವನ್ನು ಯಾವಾಗ ನೀಡಲಾಗುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಸದರಿ ಸಾಲಿನಲ್ಲಿ 9,15,028 ಮೆಟ್ರಿಕ್ ಟನ್ ಕಬ್ಬನ್ನು ಅರೆಯಲಾಗಿದೆ.

ಆ) 30.6.2003ರ ವರೆಗೆ ರೈತರಿಗೆ ರೂ. 6515.06 ಲಕ್ಷ ಕಬ್ಬಿನ ಹಣವನ್ನು ಪಾವತಿಸಲಾಗಿದೆ. ಮತ್ತು 1713.22 ಲಕ್ಷ ರೂ.ಗಳನ್ನು ಪಾವತಿ ಮಾಡಬೇಕಾಗಿದೆ.

ಇ) ರೈತರಿಗೆ ಬಾಕಿ ನೀಡಬೇಕಾದ ಹಣವನ್ನು ಪಾವತಿ ಮಾಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

1. ಈಗಾಗಲೇ ದುಡಿಯುವ ಬಂಡವಾಳದ ಪುನರ್ ರಚನೆಯನ್ನು ಸಂಬಂಧಪಟ್ಟ ಬ್ಯಾಂಕಿನೊಂದಿಗೆ ಕೈಗೆತ್ತಿಕೊಳ್ಳಲಾಗಿದೆ.
2. ಹಾಲಿ ದಾಸ್ತಾನಿನಲ್ಲಿರುವ ಸಕ್ಕರೆಯನ್ನು ಮಾರಾಟ ಮಾಡಲು ಕ್ರಮವನ್ನು ಕೈಗೊಳ್ಳಲಾಗಿದೆ.

ರಾಜ್ಯದ ಕಾಲೇಜು ವಿದ್ಯಾರ್ಥಿಗಳಿಗೆ ಬಿಡುಗಡೆಯಾಗದೇ ಇರುವ ಸ್ಕಾಲರ್ ಶಿಪ್ ಹಣ

2265 (2793) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕಾಲೇಜು ವಿದ್ಯಾರ್ಥಿಗಳಿಗೆ ನೀಡಬೇಕಾದ ಸ್ಕಾಲರ್‌ಶಿಪ್ ಹಣವನ್ನು ಕಾಲೇಜುಗಳಿಗೆ ಕಳೆದೆರಡು ವರ್ಷಗಳಿಂದ ನೀಡದೇ ತೊಂದರೆಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ವಿದ್ಯಾರ್ಥಿಗಳಿಗೆ ಬಾಕಿ ನೀಡಬೇಕಾದ ಸ್ಕಾಲರ್‌ಶಿಪ್ ಹಣದ ಮೊತ್ತವೆಷ್ಟು;

ಇ) ಇದನ್ನು ಯಾವಾಗ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ವಿದ್ಯಾರ್ಥಿವೇತನ ಹಣವನ್ನು ನಿಯತಕಾಲಿಕವಾಗಿ ಕಾಲ ಕಾಲಕ್ಕೆ ವಿತರಿಸಲಾಗುತ್ತಿದೆ. ಆದರೂ, ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಳ, ಶುಲ್ಕ ವೆಚ್ಚ, ತಾಂತ್ರಿಕ ಕೋರ್ಸ್‌ಗಳ ಬೇಡಿಕೆಯಿಂದ ಕಳೆದ ಎರಡು–ಮೂರು ವರ್ಷಗಳಿಗೆ ಒದಗಿಸಿರುವ ಅನುದಾನ ಸಾಕಷ್ಟಿರುವುದಿಲ್ಲ.

ಆ) ಕಳೆದ ಎರಡು ವರ್ಷಗಳಿಂದ 2001–02, 2002–03 ಕೊರತೆ ಈ ಕೆಳಕಂಡಂತಿದೆ:

ಸಮಾಜ ಕಲ್ಯಾಣ ಇಲಾಖೆ	–	ರೂ. 1779.94 ಲಕ್ಷಗಳು
ಪರಿಶಿಷ್ಟ ವರ್ಗಗಳ ಇಲಾಖೆ	–	ರೂ. 388.66 ಲಕ್ಷಗಳು
ಹಿಂದುಳಿದ ವರ್ಗಗಳ ಇಲಾಖೆ	–	ರೂ. 2570.22 ಲಕ್ಷಗಳು
		ರೂ. 4738.82 ಲಕ್ಷಗಳು

ಇ) ಇದು ರಾಜ್ಯದ ಒಪ್ಪಿತ ವೆಚ್ಚವಾದ್ದರಿಂದ, ಅನುದಾನವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸಲಾಗುವುದು.

ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ-ಜನರೇಷನ್ ಘಟಕದ ಸ್ಥಾಪನೆ

2266 (2794) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋಜನರೇಷನ್ ಘಟಕ ಸ್ಥಾಪಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಕೋ-ಜನರೇಷನ್ ಘಟಕದ ಸ್ಥಾಪನೆಯ ಅಂದಾಜು ವೆಚ್ಚವೆಷ್ಟು;

ಇ) ಈ ಘಟಕಕ್ಕೆ ಸಂಪನ್ಮೂಲದ ಮೂಲಗಳು ಯಾವುವು;

ಈ) ಈ ಘಟಕದ ಕಾಮಗಾರಿ ನಿರೀಕ್ಷಿತ ಗತಿಯಲ್ಲಿ ಅನುಷ್ಠಾನಗೊಳ್ಳದೇ ಇರದ ಕಾರಣಗಳೇನು;

ಉ) ಈ ಕಾಮಗಾರಿಯು ಮುಗಿದು ಕೋ-ಜನರೇಷನ್ ಘಟಕ ಯಾವಾಗ ಪ್ರಾರಂಭಿಸಲಾಗುವುದು;

ಶ್ರೀ ಎಂ. ಮಹದೇವ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಸ್ಥಾಪಿಸಲಾಗುತ್ತಿದೆ

ಆ) ಅಂದಾಜು ವೆಚ್ಚ 76.35 ಕೋಟಿ ರೂ.

ಇ) ಹುಡ್ಕೋ ಸಾಲ 57.25 ಕೋಟಿ ರೂ. ಇದರಲ್ಲಿ 23.21 ಕೋಟಿ ಬಿಡುಗಡೆ ಮಾಡಿರುತ್ತಾರೆ. ಸರ್ಕಾರದ ಕೊಡುಗೆ 5 ಕೋಟಿ ರೂ. 3.51 ಕೋಟಿ ಬಿಡುಗಡೆ ಮಾಡಿರುತ್ತಾರೆ. ಕಂಪನಿಯ ಕೊಡುಗೆ ರೂ. 25 ಕೋಟಿ.

ಈ) ಕಂಪನಿಯ ವಿದ್ಯುತ್ ಘಟಕದ ಯೋಜನೆಗೆ ಕಂಪನಿಯ ಪಾಲನ್ನು ನೀಡಲು ರೂ. 15 ಕೋಟಿ ಮೊತ್ತದ ಡಿಬೆಂಚರ್‌ಗಳನ್ನು ಖಾಸಗಿ ಬಂಡವಾಳದಾರರಿಂದ ಪಡೆಯಲಾಯ್ತು. ಈ ಹಣವನ್ನು ಉಪಯೋಗಿಸಿಕೊಳ್ಳಲು ಕಂಪನಿ, ಸರ್ಕಾರ ಹಾಗೂ ಟ್ರಸ್ಟಿಗಳನ್ನೊಳಗೊಂಡ ತ್ರಿಪಕ್ಷೀಯ ಒಪ್ಪಂದವನ್ನು ಸಹಿಮಾಡಬೇಕಿತ್ತು. ಈ ಒಪ್ಪಂದದಲ್ಲಿ ಡಿಬೆಂಚರ್ ಮೇಲಿನ ವಾರ್ಷಿಕ ಬಡ್ಡಿ ಪಾವತಿಗೆ ಸರ್ಕಾರವು ತನ್ನ ಆಯವ್ಯಯದಲ್ಲಿ ಅವಕಾಶ ಮಾಡಿಕೊಡಬೇಕೆಂಬುದು ಒಂದು ಷರತ್ತು ಆಗಿರುತ್ತದೆ. ಆದರೆ ಸರ್ಕಾರವು ಆಯವ್ಯಯದಲ್ಲಿ ಈ ಸಂಬಂಧ ಅವಕಾಶ ಮಾಡಿಕೊಡಲು ಒಪ್ಪದ ಕಾರಣ ತ್ರಿಪಕ್ಷೀಯ ಒಪ್ಪಂದವು ಏರ್ಪಟ್ಟಿಲ್ಲ. ತ್ರಿಪಕ್ಷೀಯ ಒಪ್ಪಂದವು ಏರ್ಪಡದೆ ಇರುವ ಕಾರಣ ಹಣವನ್ನು ತೆಗೆದುಕೊಂಡು ಉಪಯೋಗಿಸಿಕೊಳ್ಳಲು ಸಾಧ್ಯವಾಗದ ಕಾರಣ ಕಾಮಗಾರಿ ಮತ್ತು ಇತರ ಕೆಲಸಗಳು ಸ್ಥಗಿತಗೊಂಡವು.

ಈ ಸಂಬಂಧವಾಗಿ ಖಾಸಗಿ ಬಂಡವಾಳದಾರರ ಸಭೆಯನ್ನು 12.5.2003ರಂದು ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಬಂಡವಾಳದಾರರಿಗೆ 31.3.2003ರ ವರೆಗಿನ ಬಡ್ಡಿಯನ್ನು ಪಾವತಿಸಬೇಕೆಂದು ಮತ್ತು ಐಸಿಆರ್‌ಎ ರವರಿಂದ ರೀ-ರೇಟಿಂಗ್ ಪಡೆಯಬೇಕೆಂದು ತೀರ್ಮಾನಿಸಲಾಯಿತು. ಬಂಡವಾಳದಾರರಿಗೆ ಬಡ್ಡಿ ಹಣವನ್ನು ನೀಡಲು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. ಈ ಮಧ್ಯೆ ಕಂಪನಿಯ ನಿವ್ವಳ ಬೆಲೆಯು ಪೂರ್ತಿಯಾಗಿ ನಷ್ಟಹೊಂದಿರುವ ಕಾರಣ ರೀ-ರೇಟಿಂಗ್ ಪಡೆಯಲು ಸಾಧ್ಯವಾಗಿಲ್ಲ.